ಶ್ರೀ ಡಿ ಎಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)

ಅ) ಸರ್ಕಾರಿ –1

ಖಾಸಗಿ ಅನುದಾನಿತ –08

ಖಾಸಗಿ ಅನುದಾನರಹಿತ –59

(ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಆ) ಪ್ರಸ್ತುತ ಯಾವುದೇ ಪ್ರಸ್ತಾವನೆಗಳು ಇರುವುದಿಲ್ಲ

1038 (1039) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಮೈಸೂರು ನಗರದಲ್ಲಿರುವ ಒಂಟಿಕೊಪ್ಪಲಿನಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸಿದ್ದು ಯಾವಾಗ, ಹಾಲಿ ಇಲ್ಲಿ ಯಾವ ಶಿಕ್ಷಣ ನೀಡಲಾಗುತ್ತಿದೆ, ಎಷ್ಟೆಷ್ಟು ಮಂದಿ ವಿದ್ಯಾರ್ಥಿಗಳಿದ್ದಾರೆ,

ಆ) ಆ ಕಾಲೇಜಿನಲ್ಲಿರುವ ಕೊರಡಿಗಳ ಸಂಖ್ಯೆ ಎಷ್ಟು,

ಇ) ಈ ಕಾಲೇಜಿನ ಸಂಪೂರ್ಣ ಅವಶ್ಯಕತೆಗೆ ಎಷ್ಟು ಕೊರಡಿಗಳ ಅವಶ್ಯಕತೆ ಇದೆ,

ಈ) ಹಾಗಿದ್ದಲ್ಲಿ ಈ ಕೊರಡಿಗಳ ನಿರ್ಮಾಣಕ್ಕೆ ಎಷ್ಟು ಮೊತ್ತ ಬೇಕಾಗುವುದು, ಈ ಮೊತ್ತ ಬಿಡುಗಡೆ ಮಾಡಲು ಸರ್ಕಾರದ ನಿಲುವೇನು, ವಿವರ ನೀಡುವುದು?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಮೈಸೂರು ನಗರದಲ್ಲಿರುವ ಒಂಟಿಕೊಪ್ಪಲಿನಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು 2001–02ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದೆ ಕಲಾ ಮತ್ತು ವಾಣಿಜ್ಯ ಸಂಯೋಜನೆಗಳನ್ನು ಬೋಧಿಸಲಾಗುತ್ತಿದೆ ಕಲಾ ವಿಭಾಗದಲ್ಲಿ 158 ಹಾಗೂ ವಾಣಿಜ್ಯ ವಿಭಾಗದಲ್ಲಿ 91 ವಿದ್ಯಾರ್ಥಿಗಳಿರುತ್ತಾರೆ

ಆ) ಕಾಲೇಜಿಗಾಗಿ ಒಟ್ಟು 06 ಕೊರಡಿಗಳಿರುತ್ತವೆ

ಇ) ಇನ್ನೂ 06 ಕೊರಡಿಗಳ ಅವಶ್ಯಕತೆ ಇರುತ್ತದೆ

ಈ) ಕೊರಡಿಗಳ ನಿರ್ಮಾಣಕ್ಕಾಗಿ ಸುಮಾರು ರೂ 24 ಲಕ್ಷಗಳ ಅವಶ್ಯಕತೆ ಇರುತ್ತದೆ ಸಂಬಂಧಿಸಿದ ಯೋಜನೆಗಳಡಿಯಲ್ಲಿ ಹಂತಹಂತವಾಗಿ ಹೊಸ ಕೊರಡಿಗಳನ್ನು ನಿರ್ಮಿಸಲಾಗುತ್ತಿದೆ

1039 (1222) ಶ್ರೀ ಸಿದ್ದುಸಾವದಿ (ಜಮಖಂಡಿ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಸುವರ್ಣ ಗ್ರಾಮ ಯೋಜನೆಯಲ್ಲಿ ಗ್ರಾಮಗಳನ್ನು ಆಯ್ಕೆ ಮಾಡಲು ಇರುವ ಅರ್ಹತೆಗಳೇನು,

ಆ) ಆಯ್ಕೆ ಗ್ರಾಮಗಳು ಕೇವಲ 3000 ರಿಂದ 8000 ಜನ ಸಂಖ್ಯೆಯನ್ನು ಮಾತ್ರ ಹೊಂದಿರಬೇಕೆನ್ನುವ ನಿಯಮವಿರುವುದು ನಿಜವೇ, ಹಾಗಿದ್ದರೆ ಸಣ್ಣ ಮತ್ತು ಅತಿ ದೊಡ್ಡ ಗ್ರಾಮಗಳ ಅಭಿವೃದ್ಧಿ ಹೇಗೆ ಸಾಧ್ಯ,

ಇ) ಮೂಲಭೂತ ಸೌಲಭ್ಯಗಳನ್ನು ಈ ಯೋಜನೆಯಲ್ಲಿ ಯಾವ ರೀತಿ ಒದಗಿಸಲಾಗುವುದು ಮತ್ತು ಯಾವ ಆಧಾರದ ಮೇಲೆ ಅನುದಾನವನ್ನು ಹಂಚಿಕೆ ಮಾಡಲಾಗುವುದು,

ಈ) ಈ ಗ್ರಾಮದಲ್ಲಿರುವ ಬಯಲು ಶೌಚಾಲಯವೆಂಬ ಅನಿಷ್ಠ, ಪದ್ಧತಿಯನ್ನು ತೊಡೆದು ಹಾಕಲು ಈ ಯೋಜನೆಯಲ್ಲಿ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಲಾಗುವುದೇ, ಇಲ್ಲವಾದಲ್ಲಿ ಮತ್ಯಾವ ರೀತಿ ಶೌಚಾಲಯಗಳನ್ನು ಒದಗಿಸಲಾಗುವುದು,

ಉ) ರಾಜ್ಯದಲ್ಲಿ ತಾಲ್ಲೂಕುವಾರು ಆಯ್ಕೆ ಮಾಡಿದ ಗ್ರಾಮಗಳ ಜನ ಸಂಖ್ಯೆಗೆ ಅನುಗುಣವಾಗಿ ಒದಗಿಸಿದ ಅನುದಾನವೆಷ್ಟು (ಸಂಪೂರ್ಣ ಮಾಹಿತಿ ನೀಡುವುದು),

ಊ) ಎಂದಿನಿಂದ ಕೆಲಸವನ್ನು ಪ್ರಾರಂಭಿಸಲಾಗುವುದು

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಪ್ರತಿ ವ್ಯಕ್ತಿಗೆ ಅಂದಾಜು ರೂ 2500 ರಿಂದ 3000 ದವರೆಗೆ ಹೆಚ್ಚುವರಿ ಅನುದಾನ ಒದಗಿಸುವ ಉದ್ದೇಶವನ್ನು ಹೊಂದಿ, ರಾಜ್ಯದ ಒಟ್ಟು ಗ್ರಾಮೀಣ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು, ಆಯಾ ತಾಲ್ಲೂಕಿನ